

ಮೈಸೂರು ಅರಮನೆಯಲ್ಲಿ ಸಂಗೀತಕ್ಕೆ ಹೆಚ್ಚಿನ ಆದ್ಯತೆ ಇರುತ್ತಿತ್ತು. ಮಹಾರಾಜರ ಸಮ್ಮುಖದಲ್ಲಿ ಮೈಸೂರು ಆಸ್ಥಾನದಲ್ಲೇ ಆಶ್ರಯ ಪಡೆದ ವಿದ್ವಾಂಸರ ಕೆಲಸ ಕರ್ತವ್ಯಗಳೇನು? ಯಾವೆಲ್ಲ ವಿದ್ವಾಂಸರಿಗೆ ಮಹಾರಾಜರು ಅರಮನೆಯಲ್ಲಿ ಮಣೆ ಹಾಕಿದ್ದರು? ಮುಂತಾದ ವಿಚಾರಗಳ ಕುತೂಹಲಕರ ಸಂಗತಿ ಇಲ್ಲಿದೆ.

# ಸ್ವರ ಪ್ರತಿಭೆಗಳಿಗೆ ರಾಜಾಶ್ರಯದ ಅಂತರ್ಜಲ

■ ರಮಾ ವಿ. ಬೆಣ್ಣೂರ್

ಮೈಸೂರಿನ ಆಸ್ಥಾನ ಸಂಗೀತ ವಿದ್ವಾಂಸರ ಕಥನವೆಂದರೆ, ಅದೊಂದು ಸಾಂಸ್ಕೃತಿಕ ಪರಂಪರೆಯ ಸುದೀರ್ಘ ಇತಿಹಾಸ. ಮೈಸೂರು ಒಡೆಯರಂತಹ ಸುಸಂಸ್ಕೃತ, ದೂರದೃಷ್ಟಿಯ, ಉದಾರತೆಯ, ಮಹಾನ್ ಪೋಷಕರ ಆಡಳಿತದ ಕಾಲದಲ್ಲಿ ಮೈಸೂರಿನ ವಿವಿಧ ಕಲೆಗಳು ಅತ್ಯುನ್ನತ ಮಟ್ಟಕ್ಕೇರಿ, ಜಗದ್ವಿಖ್ಯಾತವಾದುವೆಂಬುದು ಅಕ್ಷರಶಃ ಸತ್ಯ. ಕೊಡುಗೈ ದಾನಿಗಳೂ, ವಿದ್ವಜ್ಜನ ಪೋಷಕರೂ, ಸ್ವತಃ ವಿದ್ವನ್ಮಣಿಗಳೂ ಆಗಿದ್ದ ಮೈಸೂರರಸರ ಎದುರಿಗೆ ತಮ್ಮ ಕಲಾ ಪ್ರದರ್ಶನ ಮಾಡಲು ಸ್ಥಳೀಯ ಮತ್ತು ದೂರದೂರಿನ ಕಲಾವಿದರು ತವಕಿಸುತ್ತಿದ್ದರು.

ಭಾರತದ ಬೇರೆ ಬೇರೆ ಪ್ರಾಂತ್ಯಗಳಿಂದ ಕಲಾವಿದರು ಹೀಗೆ ಬಯಸುತ್ತಿದ್ದುದೇನೋ ಸರಿ. ಆದರೆ, ಮೈಸೂರಿನಲ್ಲೇ ಅಥವಾ ಅದರ ಸುತ್ತಮುತ್ತಣ ಪ್ರದೇಶದಲ್ಲಿ ವಾಸಿಸುತ್ತಿದ್ದ ವಿದ್ವಾಂಸರು, ಬಾಲ್ಯದಿಂದಲೇ ಕಲೆಯ ಹುಚ್ಚನ್ನು ತಲೆಗೇರಿಸಿಕೊಂಡ ಹಲವಾರು ಕಲಾರಾಧಕರು, ಕಲೆಗಾಗಿಯೇ ತಮ್ಮ ಬದುಕನ್ನು ಮುಡಿಪಾಗಿಟ್ಟುಕೊಂಡವರು, ಅದರಲ್ಲಿಯೇ ತಮ್ಮ ಬದುಕಿನ ಅರ್ಥ–ಸಾರ್ಥಕತೆಯನ್ನು ಕಂಡುಕೊಂಡ ಅನೇಕರು ಈ ಪುಣ್ಯಭೂಮಿಯಲ್ಲಿ ಹುಟ್ಟಿದ್ದರು. ಅವರಿಗೆ ಆಶ್ರಯ, ಪೋಷಣೆ ಎರಡರ ಅವಶ್ಯಕತೆಯೂ ಇದ್ದಿತು. ಯೋಗ್ಯ ಗುರುಗಳ ಮಾರ್ಗದರ್ಶನ ಮತ್ತು ಸೂಕ್ತ ಆಶ್ರಯ–ಪೋಷಣೆಗಾಗಿ ನಡೆಸುತ್ತಿದ್ದ ನಿರಂತರ ಪ್ರಯತ್ನಗಳ ಕಥೆಗಳನ್ನು ಹಳೇ ಮೈಸೂರಿನ ಪ್ರತೀ ಗಲ್ಲಿ ಗಲ್ಲಿಯೂ ಪಿಸುಗುಡುತ್ತದೆ.

ಚದುರಿಹೋಗಿದ್ದ ಮೈಸೂರಿನ ವಿದ್ವಾಂಸರನ್ನು ಮರಳಿ ಮೈಸೂರಿಗೆ ಕರೆತಂದು, ಅವರಿಗೆ ಆಶ್ರಯ ನೀಡಿ, ಮೈಸೂರಿನ ಸಾಂಸ್ಕೃತಿಕ ಪ್ರಭೆ ಮತ್ತೆ ಎಲ್ಲೆಡೆ



ವೀಣೆ ಶೇಷಣ್ಣನವರು

ಪ್ರಜ್ವಲಿಸುವಂತೆ ಮಾಡಿದ ಕೀರ್ತಿ ಆಳಿದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಲ್ಲಬೇಕು. (ಅವರಿಗೂ ಮೊದಲು ಆಳಿದಂತಹ ಕಂಠೀರವ ನರಸಿಂಹರಾಜ ಒಡೆಯರ್, ಚಾಮರಾಜ ಒಡೆಯರ್ ಅವರ ಆಸ್ಥಾನದಲ್ಲೂ ಅನೇಕ ಗಾಯಕ, ವೈಣಿಕರಿದ್ದರೆಂದು ತಿಳಿದುಬರುತ್ತದೆ.) ಮುಮ್ಮಡಿಯವರು ಸ್ವತಃ ರಚಿಸಿದ 'ಶ್ರೀತತ್ತ್ವನಿಧಿ'ಯು ಒಂದು ಅಪರೂಪದ ಉದ್ಗ್ರಂಥ. ಅವರ ಆಸ್ಥಾನದಲ್ಲಿ ವೀಣಾ ಭಕ್ಷಿ ವೆಂಕಟಸುಬ್ಬಯ್ಯ, ಮೂಗೂರು ಸುಬ್ಬಣ್ಣ, ಮೈಸೂರು ಸದಾಶಿವರಾವ್ ಮುಂತಾದ ವಿದ್ವಾಂಸರಿದ್ದರು.

ಭಕ್ಷಿ ಎಂದರೆ ಮುಖ್ಯಸ್ಥ. ವೀಣಾ ವೆಂಕಟಸುಬ್ಬಯ್ಯನವರು ಒಡೆಯರಿಗೆ ಎಷ್ಟು ಆಪ್ತರಾಗಿದ್ದರೆಂದರೆ, ರಾಜ್ಯಾಡಳಿತದಲ್ಲಿಯೂ ಸಲಹೆ ಸೂಚನೆಗಳನ್ನು ನೀಡುವಷ್ಟು. ವೆಂಕಟಸುಬ್ಬಯ್ಯನವರ ಮನೆಗೆ ಬಿಚ್ಚುಗತ್ತಿ ಪಹರೆಯನ್ನಿತ್ತುದಲ್ಲದೆ, ದೊಡ್ಡ ಮೊತ್ತದ ಮಾಸಾಶನವೂ ಸಿಗುವಂತೆ ನೋಡಿಕೊಂಡಿದ್ದರಂತೆ ಪ್ರಭುಗಳು! ಅವರ ಸಂಗೀತದ ವಿದ್ವತ್ತಿಗೆ ಮೆಚ್ಚಿ, ಒಂದು ಚಿನ್ನದ ವೀಣೆ ಮತ್ತು ಹೆಗ್ಗಡದೇವನಕೋಟೆ ತಾಲೂಕಿನ ಶಂಖಹಳ್ಳಿಯನ್ನೂ ಜಹಗೀರಾಗಿ ಕೊಟ್ಟಿದ್ದರು. ಬಹುಶಃ ಆಸ್ಥಾನ ವಿದ್ವಾಂಸರಲ್ಲಿ ಇಷ್ಟು ಇನಾಮುಗಳನ್ನು ಪಡೆದವರು ಅವರು ಮಾತ್ರ ಎಂದು ಕಾಣುತ್ತದೆ. ಇದೇ ವೆಂಕಟಸುಬ್ಬಯ್ಯನವರ ಮನೆಗೆ (ತ್ಯಾಗರಾಜರ ಗುರುಗಳಾಗಿದ್ದರೆಂದು ಹೇಳಲಾದ) ಸೊಂಟಿ ವೆಂಕಟರಮಣಯ್ಯನವರು ಬಂದು, ಅದ್ಭುತವಾಗಿ ದ್ವಿಜಾವಂತಿ ರಾಗವನ್ನು ಹಾಡುತ್ತಿದ್ದಾಗ, ಇಂತಹ ದಿವ್ಯ ಸಂಗೀತವನ್ನು ಪ್ರಭುಗಳೂ ಕೇಳಲೆಂದು ಶೀಘ್ರವಾಗಿ ಅವರನ್ನು ಮನೆಗೆ ಬರಮಾಡಿಕೊಂಡರಂತೆ ವೆಂಕಟಸುಬ್ಬಯ್ಯ. ಮುಂದೆ ಸೊಂಟಿ ವೆಂಟರಮಣಯ್ಯನವರು ಮೈಸೂರಿನಲ್ಲೇ ನೆಲೆಸಿ, ಅಲ್ಲಿಯೇ ಸ್ವರ್ಗಸ್ಥರಾದರೆಂಬುದು ದಂತಕತೆ.

ತ್ಯಾಗರಾಜರ ಪ್ರಶಿಷ್ಯರಾದ ಸದಾಶಿವರಾಯರ ಸಂಗೀತವನ್ನು ಕೇಳಿ, ಮೆಚ್ಚಿ, ಅವರನ್ನು ಆಸ್ಥಾನ ವಿದ್ವಾಂಸರನ್ನಾಗಿ ಮುಮ್ಮಡಿಯವರು ನೇಮಿಸಿಕೊಂಡಿದ್ದರಿಂದ, ತ್ಯಾಗರಾಜರ ಶಿಷ್ಯ ಪರಂಪರೆಯ ಕೊಂಬೆಯೊಂದು ಮೈಸೂರಿನಲ್ಲೂ ಕವಲೊಡೆಯಲು ಸಾಧ್ಯವಾದುದು. ಸದಾಶಿವರಾಯರ ಶಿಷ್ಯರಲ್ಲಿ ವೀಣೆ ಶೇಷಣ್ಣ, ಸುಬ್ಬಣ್ಣ, ಚಿಂತಲಪಲ್ಲಿ ವೆಂಕಟರಾವ್ ಮುಂತಾದವರು ಖ್ಯಾತರು.

ಮುಂದೆ ಪಟ್ಟಕ್ಕೇರಿದ ಚಾಮರಾಜೇಂದ್ರ ಒಡೆಯರ್ ಅವರೂ ಸಂಗೀತ ಪ್ರೇಮಿಗಳಾಗಿದ್ದವರು. ಅವರ ಆಸ್ಥಾನದಲ್ಲಿ ಶೇಷಣ್ಣ, ಸುಬ್ಬಣ್ಣ, ವೀಣಾ ಚಿಕ್ಕಸುಬ್ಬರಾಯರು,